ಸರೋವರದ ಬಳಿಬಂದು ಎಷ್ಟು ಹುಡುಕಿದರೂ ವೈಶಂಪಾಯನನ ಸುಳಿವು ಸಿಗುವುದಿಲ್ಲ. ಆತ ನನ್ನಲ್ಲಿ ಮೋಹಗೊಂಡು, ಅನುಚಿತವಾಗಿ ವರ್ತಿಸಿ, ನಾನು 'ಗಿಳಿಯಾಗಿ ಹುಟ್ಟು' ಎಂದು ಶಾಪವನ್ನು ನೀಡಿದ್ದರಿಂದ ತೀರಿಕೊಂಡನು; ಆತ ನಿನ್ನ ಸ್ನೇಹಿತ ವೈಶಂಪಾಯನನೆಂದು ತಿಳಿದಿರಲಿಲ್ಲ ಎಂಬ ನಿಜ ವೃತ್ತಾಂತವನ್ನು ಮಹಾಶ್ವೇತೆ ವಿವರಿಸುವಳು. ಗೆಳೆಯನು ಮೃತಪಟ್ಟ ಸಂಗತಿಯನ್ನು ಕೇಳಿ ಚಂದ್ರಾಪೀಡ ಎದೆಯೊಡೆದು ಸಾಯುತ್ತಾನೆ. ಕೊನೆಗೆ ಪುಂಡರೀಕ–ಚಂದ್ರಾಪೀಡ ದಿವ್ಯ ದೇಹವನ್ನು ಹೊಂದಿ, ಮಹಾಶ್ವೇತೆ–ಕಾದಂಬರಿಯನ್ನು ವಿವಾಹವಾಗುವರು.

ಸಮಗ್ರ ದೃಷ್ಟಿಯಿಂದ ಪರಿಭಾವಿಸಿದರೆ ಕಾದಂಬರಿಯ ಜೀವನಕತೆಗಿಂತ ಗಿಳಿ ಮತ್ತು ಮಹಾಶ್ವೇತೆಯ ವೃತ್ತಾಂತ ಅತ್ಯಂತ ಸ್ವಾರಸ್ಯಪೂರ್ಣವೂ, ಹೃದಯಸ್ಪರ್ಶಿಯೂ ಆಗಿದೆ. ಎರಡೂ ಪ್ರಣಯ ಕತೆಗಳಲ್ಲಿ ಸಾಮ್ಯತೆಗಳಿವೆ. ಆದರೆ, ಮಹಾಶ್ವೇತೆಯಲ್ಲಿನ ಪ್ರೇಮನಿಷ್ಠೆ, ಸಂಯಮ, ಸಂಕಲ್ಪ, ವೈರಾಗ್ಯಯುಕ್ತ ಅಲೌಕಿಕ ದೃಢತೆ–ಇವು ಕಾದಂಬರಿಯಲ್ಲಿ ಕಾಣಬರುವುದಿಲ್ಲ; ಅವಳದ್ದು ಅರಮನೆಯೊಳಗಿನ ಅನುಭವಲೋಕ; ಲೌಕಿಕ ಶೃಂಗಾರ ಭಾವ. ಮಹಾಶ್ವೇತೆಯ ನಡತೆಯಲ್ಲಿ ಪ್ರೀತಿ, ಸ್ನೇಹ, ಗಾಂಭೀರ್ಯ ತುಂಬಿರುವುದರಿಂದ, ಅವಳ ನಿರ್ಧಾರಗಳು ಸರಳ, ನೇರ. ಆದ್ದರಿಂದಲೇ, ಚಂದ್ರಾಪೀಡನಿಗೆ ತನ್ನ ವೃತ್ತಾಂತವನ್ನು ನಿಸ್ಸಂಕೋಚವಾಗಿ, ನಿರ್ಭಿಡೆಯಿಂದ ಹೇಳುತ್ತಾಳೆ. ಕರ್ಣಾಟಕ ಕಾದಂಬರಿಯಲ್ಲಿ ಅಪಾರವಾದ ವರ್ಣನಾ ಜಗತ್ತಿದೆ; ಅದು ಸಹೃದಯನ ಕಣ್ಣೆದುರು ತೆರೆದುಕೊಳ್ಳುವ ಒಂದು ಚಿತ್ರಶಾಲೆ. ಹೀಗಾಗಿ, ವಿಸ್ತಾರವಾದ ಕಥಾಭಿತ್ತಿಯುಳ್ಳ ನಾಗವರ್ಮನ ಕಾವ್ಯ ಶಬ್ದಾರ್ಥ ಸಮನ್ವಿತವಾದ ವಿಶಿಷ್ಟ ಕಾವ್ಯ.

## ಕುಮಾರಚಲ್ಯ

ಕುಮಾರಚಲ್ಯ ಎಂಬ ಕಾವ್ಯನಾಮದಲ್ಲಿ ಬರೆಯುವ ಕವಿ, ವಿಮರ್ಶಕ, ಸಂಶೋಧಕ ಸಿ.ಎಸ್. ಶಿವಕುಮಾರಸ್ವಾಮಿ ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದ ಕನ್ನಡ ಭಾರತಿಯಲ್ಲಿ ಪ್ರಾಧ್ಯಾಪಕರಾಗಿ, ಜೊತೆಗೆ ವಿವಿಧ ಹುದ್ದೆಗಳನ್ನು ನಿರ್ವಹಿಸಿ ನಿವೃತ್ತರು. 20ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಅವರ ಪ್ರಾತಿನಿಧಿಕ ಪುಸ್ತಕಗಳು: 'ನವಾಬ', 'ಗುಲಾಬಿ ಮತ್ತು ಪಾರಿವಾಳ' (ಕವನ ಸಂಕಲನ), 'ಕಾಲಮಾನ', 'ಅಭಿಜ್ಞಾನ', 'ನಿಚ್ಚಂ ಪೊಸತು' (ವಿಮರ್ಶೆ), 'ಬೇರು ತೋರಿದ ಹಾದಿ' (ಜಾನಪದ), 'ಹಿಂದಣ ಹೆಜ್ಜೆಯನರಿಯದೆ' (ಸಂಶೋಧನೆ). ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಕಟಣೆ 'ದೇವುಡು' ತೆಲುಗು ಭಾಷೆಗೆ ಅನುವಾದಗೊಂಡಿದೆ. ಅವರ ಪ್ರಧಾನ ಸಂಪಾದಕತ್ವದಲ್ಲಿ ಕುವೆಂಪು ಸಾಹಿತ್ಯ ಪದವಿವರಣ ಕೋಶಗಳ ಎಂಟು ಸಂಪುಟಗಳು ಪ್ರಕಟವಾಗಿವೆ. ಕುಮಾರಚಲ್ಯ ಮೂಲತಃ ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಚಲ್ಯ ಗ್ರಾಮದವರು.